ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಎರಡು ಬಾರಿ ನಿವೇಶನವನ್ನು ಮಾಡಿ ಅದಕ್ಕೆ ಎರಡು ಸಲ ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ವಿಚಾರದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

12) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಅಶೋಕ ಕಾಟ್ವೆ: ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಪ್ರತಿದಿವಸ ನೀರು ಕೊಡುತ್ತೇವೆಂದು ಮಹಾನಗರಸಭೆ ಹೇಳಿದ್ದರೂ ಸಹ ಕಳೆದ 2-3 ತಿಂಗಳಿಂದ ನೀರಿನ ಹಾಹಾಕಾರ ಇದ್ದು, ಅಲ್ಲಿ 15 ದಿವಸದಿಂದ 1 ತಿಂಗಳವರೆಗೆ ನೀರು ಬರುತ್ತಿಲ್ಲ. ಆದುದರಿಂದ ಆಲ್ಲಿನ ಜನ ಖಾಲಿ ಕೊಡಗಳ ಹೋರಾಟ ಹಾಗೂ ರಸ್ತಾರೋಕೋ ಮಾಡುತ್ತಿದ್ದಾರೆ. ಅಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಮೂರು ಕಡೆಯಿಂದ ನಾವು ನೀರು ತೆಗೆದುಕೊಳ್ಳುತ್ತೇವೆ ಒಂದು ನೀರು ಸಾಗರದಿಂದ, ಎರಡನೆಯದಾಗಿ ಉಳಕಲ್ಲು, ಮೂರನೆಯದಾಗಿ ಮಲಪ್ರಭಾ ನದಿಯಿಂದ ತೆಗೆದುಕೊಳ್ಳುತ್ತೇವೆ. ಈಗ ನೀರು ಸಾಗರಕ್ಕೆ ಹೋದಬಾರಿ ಸನ್ಮಾನ್ಯ ಬಚ್ಚೇಗೌಡ ಎಕ್ಸ್‌ಪ್ರೆಸ್ ಫೀಡರ್ ಲೈನ್ ಹಾಕುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಇನ್ನೂ ಮಾಡಲಿಲ್ಲ. ಆದುದರಿಂದ ಅಲ್ಲಿ ವಿದ್ಯುತ್ತಿನ ಆಭಾವದಿಂದ ನೀರು ಸಾಗರಕ್ಕೆ ನಮಗೆ ತೊಂದರೆಯಾಗುತ್ತಿದೆ. ಇನ್ನು ಎರಡನೆಯದಾಗಿ ಉಳಕಲ್ಲು ಸಾಗರದಿಂದ ನೀರು ತೆಗೆದುಕೊಳ್ಳುತ್ತಿದ್ದೆವು. ಅಲ್ಲೂ ಸಹ ನೀರು ಕೆಟ್ಟಿದೆ. ಆ ನೀರು ಕುಡಿಯುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದರಿಂದ ಅಲ್ಲಿಯ ನೀರೂ ಸಹ ಬರುತ್ತಿಲ್ಲ. ಆ ನೀರನ್ನು ಸಹ ಆದಷ್ಟು ಬೇಗ ಸರ್ಕಾರದವರು ಪೂರೈಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ ಮಲಪ್ರಭಾ ನೀರು ನಮಗೆ ಬರುತ್ತಿದೆ. ಆ ನೀರೂ ಸಹ ಇವತ್ತಿನ ಮಟ್ಟಿಗೆ ಮೂರು ಸ್ಪೈನಲ್‌ಗಳಿಂದ ಬರುತ್ತಿದೆ. ಒಂದು ಸ್ಪೈನಲ್ ಏನಿದೆ ನೀರಿನಿಂದ ಮೇಲೆ ಬಂದಿದೆ. ಎರಡನೇ ಸ್ಪೈನಲ್ ಏನಿದೆ ಅದು ಒಂದು ಅಡಿ ಮಾತ್ರ ನೀರು ಬಿದ್ದಿದೆ. ಎಂದರೆ ಇನ್ನು 15 ದಿವಸ ಮಾತ್ರ ನೀರು ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆ ಮಾಡಿದೆ. ಇನ್ನು ಮೂರನೇ ಸ್ಪೈನಲ್‌ನಲ್ಲಿ ಈಗಾಗಲೇ ಹೂಳು ತುಂಬಿ ಹೂಳನ್ನು ತೆಗೆಯಲಿಲ್ಲವೆಂದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಒಂದು ನಿಮಿಷದಲ್ಲಿ ಹೇಳಬೇಕು. ಅವರೆಲ್ಲಾ ಹೇಳುತ್ತಾರೆ. ನೀವು ಬಹಳ ಬುದ್ಧಿವಂತರು ಎಂದು. ಹುಬ್ಬಳ್ಳಿ ನಗರದಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳಿ ಮುಗಿಸಬೇಕು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವ ವಿಚಾರ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಅಶೋಕ ಕಾಟ್ವೆ: ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಮೂರನೇ ಸ್ಟೈನಲ್‌ನಲ್ಲಿ ಕೂಡ ಹೂಳು ತೆಗೆಯಲಿಲ್ಲ.

ಅಧ್ಯಕ್ಷರು: ಮೇಡಂ ನೀವು ನಿಮ್ಮ ಮೆಂಬರ್‌ಗಳನ್ನು ಎಲ್ಲಾ ಟ್ರೈನ್ ಮಾಡಬೇಕು. ನೀವು ಸೀನಿಯರ್.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ತಾತ್ಕಾಲಿಕವಾಗಿ ಅದನ್ನು ಬಗೆಹರಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೂ ಅದನ್ನೆಲ್ಲಾ ಸರ್ಕಾರ ತೆಗೆದುಕೊಳ್ಳುತ್ತದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡುತ್ತೇವೆ.

(13) ಮೌಲಾನ ಅಜಾದ್ ವುಮೆನ್ ಮೆಡಿಕಲ್ ಕಾಲೇಜ್ ಕುರಿತು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅಧ್ಯಕ್ಷರೆ, ನಾನು ''ಮೌಲಾನ ಅಜಾದ್ ವುಮೆನ್ ಮೆಡಿಕಲ್ ಕಾಲೇಜ್'' ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮ್ಯಾನೇಜ್‌ಮೆಂಟ್‌ನಿಂದ ತೊಂದರೆಯಾಗಿದೆ. ಅದಕ್ಕೆ ಮಾನ್ಯ ಸಚಿವರು ಸಹ ಭರವಸೆಯನ್ನು ಕೊಟ್ಟರು. ಆ ವಿದ್ಯಾರ್ಥಿಗಳನ್ನು ಬೇರೆ ಕಾಲೇಜ್‌ಗಳಿಗೆ ಪ್ರವೇಶ ಕೊಡುತ್ತೇವೆನ್ನುವುದೆಂದು ಹೇಳಿದ್ದಾರೆ. ನಾನು ಮೊನ್ನೆ ಸ್ವತಃ ಸಚಿವರನ್ನು ಭೇಟಿಯಾದಂತಹ ಸಂದರ್ಭದಲ್ಲಿ ಈಗಾಗಲೇ ಆರ್ಡರ್ ಆಗಿದೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿನ ವಿದ್ಯಾರ್ಥಿಗಳು ಇದುವರೆಗೂ ಆರ್ಡರ್ ಮುಟ್ಟಿಲ್ಲವೆಂದು ಫೋನ್ ಮಾಡಿದ್ದರು. ಅವರ ಭವಿಷ್ಯ ತೀರಾ ಚಿಂತಾಜನಕವಾಗಿದೆ. ಆದುದರಿಂದ, ದಯಮಾಡಿ ಅವರಿಗೆ ಈ ಆರ್ಡರ್ ತಕ್ಷಣ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎಂ.ಶಂಕರ್ ನಾಯಕ್: ಮಾನ್ಯ ಅಧ್ಯಕ್ಷರೆ, ಮೌಲಾನ ಅಜಾದ್ ವುಮೆನ್ಸ್ ಮೆಡಿಕಲ್ ಕಾಲೇಜ್‌ನಲ್ಲಿರುವಂತಹ ವಿದ್ಯಾರ್ಥಿಗಳನ್ನು ಬೇರೆ ಬೇರೆ ಕಾಲೇಜುಗಳಿಗೆ ವರ್ಗಾಯಿಸಬೇಕೆಂದು ಈಗಾಗಲೇ ತೀರ್ಮಾನ ಮಾಡಲಾಗಿದೆ. ಇದನ್ನು ಸಂಬಂಧಪಟ್ಟ ಆಡಳಿತ ಮಂಡಳಿಯವರ ಜೊತೆಗೆ ಚರ್ಚೆ ಮಾಡಿ ಎಷ್ಟು ವಿದ್ಯಾರ್ಥಿಗಳನ್ನು ಬೇರೆ ಕಾಲೇಜುಗಳಿಗೆ ಕಳುಹಿಸಬಹುದೆನ್ನುವ ತೀರ್ಮಾನವಾಗಿ ಎಂದು ಲಿಸ್ಟ್ ಮಾಡಿ ಅದಕ್ಕೆ ನಾನು ಆಗಲೇ ಅಪ್ರೂವಲ್ ಕೊಟ್ಟಿದ್ದೇನೆ. ನಿನ್ನೆ ಅದು ಇಷ್ಯೂ ಆಗಿರಬೇಕೆಂದು ಕಾಣುತ್ತದೆ. ಈ ಲಿಸ್ಟನ್ನು ಮಾನ್ಯ ಸದಸ್ಯರಿಗೂ ತೋರಿಸಿದ್ದೇನೆ. ಮಾನ್ಯ ಸದಸ್ಯರು ಯಾವ್ಯಾವ ವಿದ್ಯಾರ್ಥಿಗಳನ್ನು ಯಾವ್ಯಾವ ಕಾಲೇಜುಗಳಿಗೆ ಹಂಚಿಕೆ ಮಾಡಲಾಗಿದೆ ಎಂಬುದನ್ನು ನೋಡಿದ್ದಾರೆ. ಅದು ನಿನ್ನೆ ದಿವಸ ಇಷ್ಯೂ ಆಗಿರಬೇಕು, ಆಗಿಲ್ಲದಿದ್ದರೆ ನಾನು ಈ ದಿನ ಸಾಯಂಕಾಲದೊಳಗೆ ಆರ್ಡರ್ ಅನ್ನು ಕಳುಹಿಸಿ ಕೊಡುತ್ತೇನೆ.